# **ಕೆಟ್ಟೆನಲ್ಲೊ ಹರಿಯೆ ಸಿಟ್ಟು ಮಾಡಿ**

1. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchha Rayaru, page No. 14.
2. **Ref.:** Samagra Dasa Sahitya, Samputa 3.1 published by Kannada & Culture Dept, Govt of Karnataka, Bengaluru, page No. 232.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 198.
4. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 144.
5. **Note:** Lyrics given here are same as in Ref. 1. The wordings in Ref. 2, Ref. 3 are same as in Ref. 1. The wordings in Ref. 4 are slightly different and are not considered here.
6. **Note:** Singer has followed these lyrics.

ರಾಗ: ಭೈರವಿ ತಾಳ: ತ್ರಿಪುಟ

ಕೆಟ್ಟೆನಲ್ಲೊ ಹರಿಯೆ , ಸಿಟ್ಟು ಮಾಡಿ
ಎನ್ನಬಿಟ್ಟು ಕಳೆಯಬೇಡ || ಪ ||

ಬಂದೆನು ನಾನು ತಂದೆ-ತಾಯಿಗಳುದರದಿ
ಒಂದನೂ ಅರಿಯದೆ ಬಾಲಕತನದೊಳು
ಮುಂದುವರಿದ ಯೌವನದೊಳು ಸತಿ-ಸುತ -
ರಂದವ ನೋಡುತ ನಿನ್ನ ನಾ ಮರೆತೆನು || 1 ||

ಸ್ನಾನ-ಸಂಧ್ಯಾನವು ಹೀನವಾಯಿತು ಬಹು-
ಮಾನವಿಲ್ಲದೆ ಕುಲಹೀನರಾಶ್ರಯದಿಂದ
ಜ್ಞಾನಿಗಳೊಡನಾಟವಿಲ್ಲದೆ ಮನದೊಳು
ದಾನ-ಧರ್ಮದ ಬಟ್ಟೆಯೆಂತೆಂದು ಮರೆತೆನು || 2 ||

ಮೊದಲೆ ಬುದ್ಧಿಯು ಹೀನ ಅದರೊಳು ವೃದ್ಧಾಪ್ಯ

ಕದನವು ದಶದಿಕ್ಕಿನುದಯದ ರಾಯರ
ಎದೆನೀರು ಬತ್ತಿತು ಅದರಿಂದ ನಿನ್ನಯ
ಪದಪದ್ಮಯುಗಳದ ತುದಿಯ ನಾ ಮರೆತೆನು || 3 ||

ಮೂಢನಾದೆನು ನಿನ್ನ ಬೇಡಿಕೊಳ್ಳದೆ ನಾನು
ಕಾಡೊಳಗಾಡುವ ಮೃಗದಂತೆ ಜೀವಿಸಿ
ಗೂಡೊಳಗಿರುತಿಹ ಗೂಬೆಯ ತೆರನಂತೆ
ಮಾಡದೆ ನಿನ್ನಯ ಸ್ಮರಣೆಯ ಮರೆತೆನು || 4 ||

ಬುದ್ಧಿಹೀನನು ನಾನು ಉದ್ಧರಿಸೆಲೋ ದೇವ
ಮುದ್ದು ಶ್ರೀ ಪುರಂದರವಿಠಲ ಎನ್ನ
ಬುದ್ಧಿಯೊಳಡಗಿಯೆ ತಿದ್ದಿಟ್ಟು ನಡೆಸಯ್ಯ
ಪೊದ್ದುವೆ ನಿನ್ನಯ ಚರಣಾರವಿಂದವ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಬಟ್ಟೆ** = ರೀತಿ, ಮಾರ್ಗ

**ಪೊದ್ದುವೆ** = ಹೊಂದುವೆ

**ದಶದಿಕ್ಕಿನ ಉದಯದ ರಾಯರು** = ಯಾವಾಗಲೂ ಪ್ರಬಲವಾಗಿರುವ ದಶೇಂದ್ರಿಯಗಳು.

**Classification:** Keerthane
**Ankita:** sri purandara vittala
**Location:** NA
**Category:** Loka Neeti, Jeevanoddhara, samsara chitragalu
**Sub-Category:** Krishna, sittu, snana, Sandhya vandane, jnana, mana, dana, dharma, dari, buddi, niru, kaadu, prani, goobe, smarane, deva,
**Pravachana:** NA
**Explanation:** NA